<u>1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ</u>

<u>Spl.C.150/2023</u>

ದಿಃ 06.07.2024
(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

Cw-2 Pw-2

| | | |
|---|---|---|
| ಹೆಸರು | ಃ | ರವೀಶ |
| ತಂದೆಯ ಹೆಸರು | ಃ | ಮುನಿದಾಸಶೆಟ್ಟಿ ಉಃ ಮುನಿದಾಸಯ್ಯ |
| ವಯಸ್ಸು | ಃ | 35 ವರ್ಷ |
| ಉದ್ಯೋಗ | ಃ | ಕೂಲಿ ಕೆಸಲ |
| ವಾಸಸ್ಥಳ | ಃ | ವಾಡೆದೊಡ್ಡಿ |

<u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>

1. ಚಾಸಾ.1 ನನ್ನ ತಾಯಿ.

2. ಚಾಸಾ.3 ನನ್ನ ಅಣ್ಣ.

3. ನಾನು ಪರಿಶಿಷ್ಟ ಪಂಗಡಕ್ಕೆ ಸೇರಿದ ಹಿಂದೂ ಕೊರಮ ಜಾತಿಗೆ ಸೇರಿದವನಾಗಿರುತ್ತೇನೆ.

4. ಈಗ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿ ಹಿಂದೂ ಕುರುಬ ಸಮುದಾಯಕ್ಕೆ ಸೇರಿದವರಾಗಿದ್ದು ನನಗೆ ಗೊತ್ತು.

5. ಆರೋಪಿತನಿಗೆ ನಮ್ಮ ಜಾತಿ ಗೊತ್ತು.

6. ಈಗ ಸುಮಾರು 10 ತಿಂಗಳುಗಳ ಹಿಂದೆ ಒಂದು ದಿನ ಬೆಳಿಗ್ಗೆ ಸುಮಾರು 9.30 ಗಂಟೆ ಸಮಯದಲ್ಲಿ ನನಗೆ ಚಾಸಾ.1

ಇವಳು ಬೆಳಗ್ಗಿನ ತಿಂಡಿ ಮಾಡಿಸಲೆಂದು ಕೈ ಹಿಡಿದುಕೊಂಡು ಹೋಗುತ್ತಿದ್ದಾಗ ಆರೋಪಿತನು ಹಿಂದಿನಿಂದ ಒಮ್ಮಿಂದೊಮ್ಮೆಲೆ ದ್ವಿಚಕ್ರ ವಾಹನವನ್ನು ತೆಗೆದುಕೊಂಡು ಬಂದು ನನಗೆ ಡಿಕ್ಕಿ ಹೊಡೆಸಲು ಪ್ರಯತ್ನಿಸಿದ್ದು ವಿಫಲವಾಗಿರುತ್ತಾನೆ.

7. ಅದಕ್ಕೆ ನಾವು ಆರೋಪಿತನಿಗೆ ಕೇಳಲು, ಆತನು ನಮಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆ.

8. ಅದೂ ಅಲ್ಲದೇ ನನಗೆ ಆರೋಪಿತನು ತನ್ನ ಕೈ ಮುಷ್ಟಿಯಿಂದ ಮುಖಕ್ಕೆ ಗುದ್ದಿರುತ್ತಾನೆ.

9. ಇಷ್ಟನ್ನು ಹೊರತುಪಡಿಸಿ ಅಲ್ಲಿ ಇನ್ನೇನೂ ನಡೆದಿರುವುದಿಲ್ಲ.

10. ಆ ಪ್ರಕಾರ ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅಭಿಯೋಜಕರು ಕೋರಿದ್ದಾರೆ. ಅದರಂತೆ ಸಾಕ್ಷಿಯನ್ನು ಪ್ರತಿಕೂಲ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರಿಗೆ ಅನುಮತಿ ನೀಡಲಾಗಿದೆ)**

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ</u>

11. ನನ್ನ ತಾಯಿ ಚಾಸಾ.1 ಇವಳಿಗೆ ಕತ್ತಿಗೆ ಚಿವುಟಿ ಕಾಲಿನಿಂದ ಒದ್ದಿರುತ್ತಾನೆ ಎನ್ನುವುದು ಸರಿ.

12. ಆರೋಪಿ ಕೊರಮ ನನ್ನ ಮಗನೇ ಎಂದು ಬೈದಿದ್ದಲ್ಲದೇ, ನಮ್ಮ ಶೆಡ್ಡಿಗೆ ಬೆಂಕಿ ಹಾಕುತ್ತೇನೆ ಎಂದೂ ಸಹ ಬೆದರಿಕೆ ಹಾಕಿರುತ್ತಾನೆ ಎನ್ನುವುದು ಸರಿ.

ಪಾಟೀ ಸವಾಲುಃ ಶ್ರೀ. ಡಿ.ಆರ್.ಜೆ., ವಕೀಲರಿಂದ ಆರೋಪಿಯ ಪರವಾಗಿಃ

13. ಆರೋಪಿ ದ್ವಿಚಕ್ರ ವಾಹನದಿಂದ ನನ್ನ ತಾಯಿಗೆ ಗುದ್ದಿರುತ್ತಾನೆ.

14. ನನಗೆ ನನ್ನ ಬಲಗೆನ್ನೆಗೆ ಗುದ್ದಿರುತ್ತಾನೆ.

15. ಖಾಲಿ ಜಾಗದ ವಿಚಾರವಾಗಿ ಆರೋಪಿತನಿಗೂ ಮತ್ತು ನಮಗೂ ಸಾಕಷ್ಟು ಪೊಲೀಸ್ ಕಂಪ್ಲೇಂಟ್‌ಗಳು ಆಗಿರುತ್ತವೆ ಎನ್ನುವುದು ಸರಿ.

16. ಆರೋಪಿ ತನ್ನ ಮನೆ ಎತ್ತರದ ಕಟ್ಟೆ ಹಾಕಿಕೊಂಡು ಅದರ ಮೇಲೆ ಮನೆ ಕಟ್ಟಿಕೊಂಡಿದ್ದರಿಂದ ನಮ್ಮ ಖಾಲಿ ಜಾಗದಿಂದಲೇ ಆತನು ಹಾಯ್ದು ತನ್ನ ಮನೆಗೆ ಹೋಗಬೇಕಾಗಿರುತ್ತದೆ ಎನ್ನುವುದು ಸರಿ.

17. ಸರ್ಕಾರದಿಂದ ಪರಿಹಾರದ ಹಣವನ್ನು ಪಡೆಯುವ ಉದ್ದೇಶದಿಂದ ಈ ಪ್ರಕರಣವನ್ನು ಆರೋಪಿತನ ವಿರುದ್ದ ಸುಳ್ಳಾಗಿ ಹೂಡಿರುತ್ತೇವೆ ಎನ್ನುವುದು ಸರಿಯಲ್ಲ.

18. ಸರ್ಕಾರದಿಂದ ಬಂದ ಹಣದಿಂದ ನಾವು ಕಾಂಪೌಂಡ್ ಕಟ್ಟಿಕೊಂಡಿರುತ್ತೇವೆ ಎನ್ನುವುದು ಸರಿ.

19. ನನಗೂ ಮತ್ತು ಚಾಸಾ.1 ಇವಳಿಗೂ ಯಾವುದೇ ರೀತಿಯಲ್ಲಿ ಆರೋಪಿತನು ಹಲ್ಲೆ ಮಾಡಿರುವುದಿಲ್ಲ ಮತ್ತು ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ ಮತ್ತು ಜಾತಿ ನಿಂದನೆ ಮಾಡಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ.

20. ಆರೋಪಿತನು ಯಾವ ಕಾಲಕ್ಕೂ ತನ್ನ ದ್ವಿಚಕ್ರ ವಾಹನವನ್ನು ತೆಗೆದುಕೊಂಡು ಬಂದು ಚಾಸಾ.1 ಇವಳಿಗೆ ಗುದ್ದಿರುವುದಿಲ್ಲವಾದರೂ ಸಹ, ಆತನ ವಿರುದ್ದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಮರುವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಜಿ ಡಿ ಮಹಾವರ್ಕರ್)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.